ನಮ್ಮ ತಾಯಿಯ ಜೊತೆ ಮೈಸೂರಿನಲ್ಲಿರುವ ಸಂಬಂಧಿಕರ ಮದುವೆಗೆ ಹೋಗಿದ್ದೆ. ಅಂದು ಸಂಜೆ ವರಪೂಜೆ ಕಾರ್ಯಕ್ರಮವಿತ್ತು. ಸಾಂಪ್ರದಾಯಿಕವಾಗಿ ರಾತ್ರಿ ಊಟಕ್ಕೆ ಕಡಬು ಮಾಡುವ ಅಭ್ಯಾಸವಿತ್ತು. ನನಗೆ ಕಡಬು ಬಹಳ ಪ್ರಿಯವಾದ ಖಾದ್ಯ. ಸಾಮಾನ್ಯವಾಗಿ ನಾನು ಚಿಕ್ಕವನೆಂದು ಅಮ್ಮ ನನ್ನನ್ನು ತನ್ನ ಜೊತೆಯಲ್ಲೇ ಊಟಕ್ಕೆ ಕೂರಿಸಿಕೊಳ್ಳುತ್ತಿದ್ದಳು. ಇದರಿಂದ ಯಾವುದನ್ನು ಎಷ್ಟು ತಿನ್ನಬೇಕು ಎನ್ನುವುದನ್ನು ನನಗೆ ತಿಳಿಹೇಳಲು ಸಾಧ್ಯವಾಗುತ್ತದೆ ಎನ್ನುವುದು ಅಮ್ಮನ ವಿಚಾರ. ಆದರೆ, ನನಗೆ ಇದರಿಂದ ಕಿರಿಕಿರಿಯೇ ಹೆಚ್ಚು. ಅಂದು ಮಾತ್ರ ಊಟದ ಸಾಲಿನಲ್ಲಿ ನಿಂತಿದ್ದ ನನ್ನನ್ನು ಗಂಡಸರ ಮಧ್ಯೆ ಕೂಡಿಸಿದರು. ಅಮ್ಮನಿಗೆ ಇದರಿಂದ ಸಮಾಧಾನವಾಗಲಿಲ್ಲ. ಆದರೆ, ನನಗೆ ಮಾತ್ರ ಹೇಳತೀರದ ಸಂತೋಷ. ನನ್ನಿಷ್ಟದ ಸಿಹಿಕಡಬನ್ನು ಎಷ್ಟು ಬೇಕಾದರೂ ತಿನ್ನಬಹುದು ಎನ್ನುವ ಖುಷಿ. ಅಮ್ಮ ಒಂದೇ ಕಡಬು ತಿನ್ನಬೇಕೆಂದು ಸಂಜ್ಞೆ ಮಾಡುತ್ತಿದ್ದರೂ, ಕಡಬುಗಳು ಎಲೆಯಲ್ಲಿ ಬಿದ್ದೊಡನೆ



ಅಮ್ಮನ ಕಡೆ ನೋಡದೆ ಮೂರ್ನಾಲ್ಕು ಕಡಬು ಇಳಿಸಿದೆ. ಅಮ್ಮನಿಂದ ದೂರ ಕುಳಿತಿದ್ದು ಲಾಭವೇ ಆಗಿತ್ತು.

**ಟಿ.ಎಲ್. ರಾಮಕೃಷ್ಣ**

## ಥ್ಯಾಂಕ್ಯು!

ಬೆಂಗಳೂರಿನ ಪ್ರವಾಸ ಮುಗಿಸಿ ಊರಿಗೆ ಹೊರಡುವ ತಯಾರಿಯಲ್ಲಿದ್ದೆವು. ಊರಿಗೆ ಹೋಗುವಾಗ



ಕಲೆ: ಗಣೇಶ ಆಚಾರ್ಯ

ಸ್ವಲ್ಪ ಏನಾದ್ರೂ ಸಿಹಿ ತೆಗೆದುಕೊಂಡು ಹೋಗುವ ಸಲುವಾಗಿ ನಮ್ಮ ನೆಂಟರ ಹುಡುಗ ಸಾತ್ವಿಕ್‌ನನ್ನು ಜೊತೆಗೆ ಕರೆದುಕೊಂಡು ಹೋದೆವು. ಅಂಗಡಿಯಾತ ನಾವು ತೋರಿಸಿದ ಸ್ವೀಟ್‌ಗಳನ್ನು ರುಚಿ ನೋಡಲು ಸಾತ್ವಿಕ್‌ಗೆ ನೀಡಿದಾಗ ಆತ ಖುಷಿಯಿಂದ ಮೆಲ್ಲುತ್ತಾ, 'ಚೆನ್ನಾಗಿದೆ' ಎಂದು ತಲೆ ಅಲ್ಲಾಡಿಸಿದ. ಖರೀದಿಸಿದ ಸ್ವೀಟ್ಸ್ ತೆಗೆದುಕೊಂಡು ಹೊರಟಾಗ ಸಾತ್ವಿಕ್ ಅಂಗಡಿಯ ಮಾಲೀಕನಿಗೆ, 'ಥ್ಯಾಂಕ್ಯೂ ರಾಜ್ಯಪಾಲರೇ' ಎಂದ! ನಾವು, 'ಹಾಗೆಲ್ಲಾ ದೊಡ್ಡವರಿಗೆ ತಮಾಷೆ ಮಾತಾಡಬಾರದು' ಎಂದೆವು. ಆತ ಅಂಗಡಿಯಿಂದ ಹೊರ ಬಂದು, ನಾಮಫಲಕ ತೋರಿಸಿದ. ಅದು 'ರಾಜಭವನ್ ಸ್ವೀಟ್ಸ್' ಎಂದಿತ್ತು! 'ರಾಜಭವನದಲ್ಲಿ ಇರುವುದು ರಾಜ್ಯಪಾಲರೇ ತಾನೇ!?' ಎಂದು ನಮಗೇ ಪ್ರಶ್ನೆ ಹಾಕಿದ. ಅವನ ಮಾತು ಕೇಳಿ ಅಂಗಡಿಯಾತನಿಗೂ ನಗು ಬಂತು.

**ನಗರ ಗುರುದೇವ್ ಭಂಡಾರ್ಕರ್**